# ಉಪ ತಹಶೀಲ್ದಾರರು, ನಾಡ ಕಾರ್ಯಲಯ, ಇಟ್ಟಿಗಿ ರವರ ನ್ಯಾಯಾಲಯ

| ಅರ್ಜಿದಾರರು | ತಕರಾರುದಾರರು |
|---|---|
| 1)ಹೆಚ್.ಎಂ.ದೇವೀರಮ್ಮ ಗಂಡ ವೀರಯ್ಯ,<br>2)ಹೆಚ್.ಎಂ.ಸಿವಲಿಂಗಯ್ಯ ತಂದೆ ವೀರಯ್ಯ,<br>3)ಹೆಚ್.ಎಂ.ಚನ್ನಯ್ಯ ತಂದೆ ವೀರಯ್ಯ,<br>4)ಹೆಚ್.ಎಂ.ನಾಗಯ್ಯ ತಂದೆ ನಾಗಯ್ಯ,<br>5)ಹೆಚ್.ಎಂ.ವೀರಭದ್ರಯ್ಯ ತಂದೆ ವೀರಯ್ಯ,<br>ಹಿರೇಮಲ್ಲನಕೇರಿ ಗ್ರಾಮ, ಹಡಗಲಿ ತಾ. | ಜಯಲಕ್ಷ್ಮಿ ಗಂಡ ವೀರಭದ್ರಯ್ಯ,<br>ಹಿರೇಮಲ್ಲನಕೇರಿ ಗ್ರಾಮ, ಹಡಗಲಿ ತಾ. |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ಗ್ರಾಮದ ಹೆಸರು | ಸರ್ವೆ ನಂಬರ್ | ವಿಸ್ತೀರ್ಣ | ತರಹೆ |
|---|---|---|---|---|
| 1. | ಹಿರೇಮಲ್ಲನಕೇರಿ | 382/4 | 8-37 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ತಾಲೂಕಿನ ಹಿರೇಮಲ್ಲನಕೇರಿ ಗ್ರಾಮದ ಸ.ನಂ.382/4 ವಿ:8-37 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಹಿರೇಮಲ್ಲನಕೇರಿ ಗ್ರಾಮದ ನಿವಾಸಿಯಾದ 1)ಹೆಚ್.ಎಂ.ದೇವೀರಮ್ಮ ಗಂಡ ವೀರಯ್ಯ, 2)ಹೆಚ್.ಎಂ. ಶಿವಲಿಂಗಯ್ಯ ತಂದೆ ವೀರಯ್ಯ, 3)ಹೆಚ್.ಎಂ.ಚನ್ನಯ್ಯ ತಂದೆ ವೀರಯ್ಯ, 4)ಹೆಚ್.ಎಂ.ನಾಗಯ್ಯ ತಂದೆ ನಾಗಯ್ಯ 5)ಹೆಚ್.ಎಂ.ವೀರಭದ್ರಯ್ಯ ತಂದೆ ವೀರಯ್ಯ ಇವರು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ದಿ:24-09-2015 ರಂದು ಅರ್ಜಿ ಸಲ್ಲಿಸಿದರು. ಗ್ರಾಮದಲ್ಲಿ ನಮೂನೆ 21 ರ ನೋಟಿಸನ್ನು ದಿನಾಂಕ:30-09-2015 ರಂದು ಜಾರಿ ಮಾಡಲಾಗಿ ನಿಗದಿತ ಅವಧಿಯೊಳಗೆ ಅಂದರೆ ದಿ:07-10-2015 ರಂದು ಹಿರೇಮಲ್ಲನಕೇರಿ ಗ್ರಾಮದ ನಿವಾಸಿಯಾದ ಜಯಲಕ್ಷ್ಮಿ ಗಂಡ ವೀರಭದ್ರಂಯ್ಯ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು, ಇಟ್ಟಿಗಿರವರು M.NO.41/2015-16 ರ ಕಡತವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ವಿಚಾರಣೆ ದಿನಾಂಕ 09-03-2016 ರಂದು ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರು ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿ ರಾಜಿಯಾಗಿರುವ ಬಗ್ಗೆ ಲಿಖಿತ ರಾಜಿಪತ್ರ ಹಾಜರುಪಡಿಸಿರುತ್ತಾರೆ. ತಕರಾರುದಾರರು ತಮ್ಮ ಹೆಸರನ್ನು ಪೌತಿ ವಾರಸಾ ಪ್ರಕಾರ ಸೇರಿಸಿದಲ್ಲಿ ತಮ್ಮದು ಯಾವುದೇ ತಕರಾರು ಇರುವುದಿಲ್ಲ ಎಂದು, ಅರ್ಜಿದಾರ 5 ಹೆಚ್.ಎಂ.ವೀರಭದ್ರಯ್ಯ ರವರ ಪತ್ನಿ ತಾನಾಗಿದ್ದು, ತನ್ನ ಗಂಡನ ಹೆಸರಿನೊಂದಿಗೆ ಜಂಟಿಯಾಗಿ ಸೇರಿಸಲು ಕೋರಿರುತ್ತಾರೆ. ಉಭಯರು ಹೆಚ್.ಎಂ. ವೀರಭದ್ರಯ್ಯ ತಂದೆ ವೀರಯ್ಯ ಇವರ ಹೆಸರಿನ ಜೊತೆ ಅವರ ಪತ್ನಿ ಜಯಲಕ್ಷ್ಮಿ ಇವರ ಹೆಸರನ್ನು ಸೇರಿಸಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಒಪ್ಪಿ ರಾಜಿಯಾಗಿರುತ್ತಾರೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ನಾ.ಕಾ.ಇ/ಪಹಣಿ/ವಿವಾದ/10/2015-16 ದಿನಾಂಕ:12-04-2016

**ಆದೇಶ**

ಪೀಟೀಕೆಯಲ್ಲಿ ವಿವರಿಸಿದ ವಾಸ್ತವಾಂಶ ಮತ್ತು ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129ರ ಪ್ರಕಾರ M.NO.41/2015-16 ರ ಪ್ರಕರಣದಲ್ಲಿ ಹೆಚ್.ಎಂ. ವೀರಭದ್ರಯ್ಯ ತಂದೆ ವೀರಯ್ಯ ಇವರ ಹೆಸರಿನ ಜೊತೆ ಅವರ ಪತ್ನಿ ಜಯಲಕ್ಷ್ಮಿ ಗಂಡ ವೀರಭದ್ರಯ್ಯ ಇವರ ಹೆಸರನ್ನು ಸೇರಿಸಿ ಚೆಕ್‌ಲಿಸ್ಟ್ ಪ್ರಕಾರ ಉಳಿದ ಹೆಸರುಗಳೊಂದಿಗೆ ಜಂಟಿಯಾಗಿ ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಉಪ ತಹಶೀಲ್ದಾರರು
ನಾಡ ಕಾರ್ಯಾಲಯ,
ನಾಡ ಕಾರ್ಯಾಲಯ, ಇಟ್ಟಿಗಿ.
ಇಟ್ಟಿಗಿ.

ಪ್ರತಿಯನ್ನು,

1. ಅರ್ಜಿದಾರರು ಮತ್ತು ತಕರಾರುದಾರು ಇವರಿಗೆ
2. ಭೂಮಿ ಕೇಂದ್ರ, ತಾಲೂಕು ಕಾರ್ಯಾಲಯ, ಹೂವಿನಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಶುದ್ಧಪ್ರತಿ ಕಡತಕ್ಕೆ.